**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಪಿಡಬ್ಲು : 10 ಸಿಡಬ್ಲು : 9

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಅರ್ಜುನ ಹೆಗಡೆ |
| ತಂದೆಯ ಹೆಸರು | : ಶ್ರೀ. ವಿಜಯ |
| ವಯಸ್ಸು | : 36 ವರ್ಷ |
| ಉದ್ಯೋಗ | : ಗೌಂಡಿ ಕೆಲಸ |
| ವಾಸ್ತವ್ಯ | : ನಿಪ್ಪಾಣಿ |
| ದಿನಾಂಕ | : 05-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(3 ನೇಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. 3 ನೇ ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 8 ಫ್ರಾಸಾಃ 9 ದಿಲೀಪ ನನಗೆ ಗೊತ್ತಿರುತ್ತಾರೆ. ನಾನು ನಮ್ಮ ಮನೆಯಿಂದ ಕೆಲಸಕ್ಕೆ ಹೋಗುವಾಗ ಬಸವೇಶ್ವರ ಚೌಕ ಪೋಲಿಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ನನ್ನ ಸಹಿ ಮಾಡಿಸಿಕೊಂಡರು. ನಾನು ಪೋಲಿಸ ಠಾಣೆಯಲ್ಲಿ ಎಷ್ಟು ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿರುವುದಿಲ್ಲ. ಯಾವ ಕಾರಣಕ್ಕೆ ಪೋಲಿಸರು ನನ್ನ ಸಹಿ

ಮಾಡಿಸಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ಎಲ್ಲಿಯೂ ಹೊರಗೆ ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸ ಠಾಣೆಯಲ್ಲಿ ಯಾವುದೇ ವಸ್ತುವನ್ನು ನನಗೆ ತೋರಿಸಿರುವುದಿಲ್ಲ.

2. ನಾನು ಮೂರು ಜನ ಆರೋಪಿತರನ್ನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ಪೋಲಿಸರು ನನ್ನ ಸಹಿ ಮಾತ್ರ ಮಾಡಿಸಿಕೊಂಡಿದ್ದಾರೆ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಮೃತನ ಮೈಮೇಲಿನ ರಕ್ತ ಹತ್ತಿದ ಬಟ್ಟೆ ಜಪ್ತು ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಆ ಪಂಚನಾಮೆಯನ್ನು ಈಗಾಗಲೇ ನಿಪಿ–40 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–40 [ಬಿ] ಎಂದು ಗುರುತಿಸಲಾಯಿತು.

3. ಸಾಕ್ಷಿಗೆ 4 ದಾಖಲೆಗಳನ್ನು ತೋರಿಸಿದ್ದು ಅವುಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ.ಆರೋಪಿತರು ಮೃತನ ಶವವನ್ನು ಸಾಗಿಸಲು ಬಳಸಿದ ಮಾರುತಿ ಶಿಫ್ಟ ಡಿಸೈರ ಕಾರನ ಡಿಕ್ಕಿಯಲ್ಲಿ ಇದ್ದ ರಕ್ತವನ್ನು ಜಪ್ತು ಮಾಡಿದ ಪಂಚನಾಮೆಯನ್ನು ಈಗಾಗಲೇ ನಿಪಿ–43 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–43 [ಬಿ] ಎಂದು ಗುರುತಿಸಲಾಯಿತು.

4. ಆರೋಪಿತರು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿಪಿ–45 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–45 [ಬಿ] ಎಂದು ಗುರುತಿಸಲಾಯಿತು.

5. ಕೃತ್ಯ ಎಸಗುವ ಸಮಯದಲ್ಲಿ ಆರೋಪಿ ರವಿ ಇತನ ಮೈಮೇಲಿದ್ದ ಬಟ್ಟೆ , ಕೃತ್ಯಕ್ಕೆ ಉಪಯೋಗಿಸಿದ ಮೊಬೈಲ ಹಾಗೂ ಆತನು ಮುಚ್ಚಿಟ್ಟ ಮೃತನ ಮೈಮೇಲಿದ್ದ ಬಂಗಾರದ ಆಭರಣಗಳ ಜಪ್ತು ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುಸಿತಿದ್ದು ಅದನ್ನು ಈಗಾಗಲೇ ನಿಪಿ–47 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–47 [ಬಿ] ಎಂದು ಗುರುತಿಸಲಾಯಿತು.

6. ನಿಪಿ–34 ರಿಂದ ನಿಪಿ–39 ರ ಫೋಟೋಗಳನ್ನು ಎಲ್ಲಿ ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ತಮ್ಮ ಇರುವಿಕೆಯನ್ನು ಮತ್ತು ಚಾಸಾಃ 8 ದಿಲೀಪ ಅವರ ಇರುವಿಕೆಯನ್ನು ಗುರುತಿಸಿದ್ದಾರೆ.

7. ಕೊಲೆ ಮಾಡಲು ಸಂಚು ರೂಪಿಸಲು ಉಪಯೋಗಿಸಿದ ಮೋಟರಸೈಕಲ ಜಪ್ತು ಪಂಚನಾಮೆಯನ್ನುಈಗಾಗಲೇ ನಿಪಿ–48 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–48 [ಬಿ] ಎಂದು ಗುರುತಿಸಲಾಯಿತು. ನಿಪಿ–40, ನಿಪಿ–43, ನಿಪಿ–45, ನಿಪಿ–47, ನಿಪಿ–48 ಪಂಚನಾಮೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ–34 ರಿಂದ ನಿಪಿ–39 ಮತ್ತು ನಿಪಿ–46 ರ ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

8. ಈ ಪ್ರಕರಣದ ಮೂರು ಜನ ಆರೋಪಿತರನ್ನು ಈ ಮೊದಲು ನಾನು ನೋಡಿರುವುದಿಲ್ಲ.

**[ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯು ಪಂಚ ಸಾಕ್ಷಿದಾರರಾಗಿದ್ದು 5 ಪಂಚನಾಮೆಗಳ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಗೆ ವ್ಯತಿರೀಕ್ತವಾಗಿ ಹೇಳಿಕೆ ನೀಡಿದ್ದರಿಂದ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು]**

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 02-04-2019 ರ ಮೇಲೆ ಪೋಲಿಸ ನೋಟಿಸನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪೋಲಿಸ ನೋಟಿಸನ್ನು ಈಗಾಗಲೇ ನಿಪಿ-41 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-41 [ಬಿ] ಎಂದು ಗುರುತಿಸಲಾಯಿತು. ಪೋಲಿಸ ನೋಟಿಸನ ಪ್ರಕಾರ ಬಸವೇಶ್ವರ ಚೌಕ ಪೋಲಿಸ ಠಾಣೆಗೆ ನಾನು ಹೋಗಿದ್ದೇನು ಎನ್ನುವುದು ಸರಿ.

2. ದಿನಾಂಕಃ 02-04-2019 ರಂದು ನಾನು ಮೊದಲನೇ ಬಾರಿ ಪೋಲಿಸ ಠಾಣೆಗೆ ರಾತ್ರಿ 08:45 ರ ಸಮಯಕ್ಕೆ ಹೋಗಿರುತ್ತೇನೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲಿಸ ಠಾಣೆಯಲ್ಲಿ ಪೋಲಿಸರು ಮೃತ ಅರವಿಂದ ಪೋಳ ಅವರ ಶವದ ಮೈಮೇಲೆ ಇದ್ದ ಬಿಳಿ ಮಿಶ್ರಿತ ಖಾಕಿ ಬಣ್ಣದ ಪ್ಯಾಂಟ್ ನ್ನು ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ವೈದ್ಯರು ಸಂಗ್ರಹಿಸಿ ಪೋಲಿಸರಿಗೆ ನೀಡಿದ್ದು, ಅದನ್ನು ಪೋಲಿಸರು ಪೋಲಿಸ ಠಾಣೆಯಲ್ಲಿ ನನಗೆ ತೋರಿಸಿ ಅದರ ಮೇಲೆ ನಾನು ಸಹಿ ಮಾಡಿದ್ದ ಸಹಿಯನ್ನು ಅಂಟಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

3. ದಿನಾಂಕಃ 03-04-2019 ರ ಪೋಲಿಸ ನೋಟಿಸಿನ ಮೇಲೆ ಸಾಕ್ಷಿಯ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ನೋಟಿಸನ್ನು ಈಗಾಗಲೇ ನಿಪಿ-42 ಎಂದು ಗುರುಸಿತಿದ್ದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-42 [ಬಿ] ಎಂದು ಗುರುತಿಸಲಾಯಿತು. ನೋಟಿಸ ನೀಡಿದ ಮರುದಿನ ಪೋಲಿಸ ಠಾಣೆಗೆ ಹೋಗಿದ್ದೇನು ಎನ್ನುವುದು ಸರಿಯಲ್ಲ.

4. ನಾನು ಠಾಣೆಯಲ್ಲಿದ್ದಾಗ RFSL ನ ಅಧಿಕಾರಿಗಳು ಕಾರಿನಲ್ಲಿ ಶವ ಸಾಗಿಸುವಾಗ ಬಿದ್ದಿದ್ದ ರಕ್ತವನ್ನು ಹತ್ತಿಯಲ್ಲಿ ಸಂಗ್ರಹಿಸಿಕೊಂಡು ಬಂದು ಪೋಲಿಸರ ಮುಂದೆ

ಹಾಜರುಮಾಡಿದ್ದು, ಪೋಲಿಸರು ಅದನ್ನು ನನ್ನ ಸಮಕ್ಷಮ ಜಪ್ತು ಮಾಡಿದರು ಎನ್ನುವುದು ಸರಿಯಲ್ಲ.

5. ನಾನು ಠಾಣೆಗೆ ಹೋಗಿದ್ದಾಗ 1 ನೇ ಆರೋಪಿ ಠಾಣೆಯಲ್ಲಿದ್ದನು ಎನ್ನುವುದು ಈಗ ನನಗೆ ನೆನಪಿಲ್ಲ. 1 ನೇ ಆರೋಪಿ ಮೃತ ಅರವಿಂದ ಪೋಳ ಅವರನ್ನು ಕೊಲೆ ಮಾಡುವ ಸಮಯದಲ್ಲಿ ತಮ್ಮ ಬಟ್ಟೆ ರಕ್ತ ಆಗಿದ್ದು, ಅದನ್ನು ಮತ್ತು ಮೋಟರಸೈಕಲನ್ನು ತಾನು ಹಾಜರುಮಾಡುತ್ತೇನೆ ಎಂದು 1 ನೇ ಆರೋಪಿ ನನ್ನ ಸಮಕ್ಷಮ ಹೇಳಿರುತ್ತಾನೆ ಎನ್ನುವುದು ನನಗೆ ಗೊತ್ತಿಲ್ಲ.

6. ಆದರ್ಶ ನಗರದ ಇನಕಮ ಟ್ಯಾಕ್ಸ ಆಫೀಸನ ಬಳಿ 1 ನೇ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಕರೆದುಕೊಂಡು ಹೋದನು ಎನ್ನುವುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಿಪಿ–37 ಮತ್ತು ನಿಪಿ–38 ಫೋಟೋ ತೆಗೆಯಲಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಮುಂದೆ ಶನಿ ದೇವರ ಮಂದಿರದ ಬಳಿ 1 ನೇ ಆರೋಪಿ ನಮ್ಮನ್ನು ಕರೆದುಕೊಂಡು ಹೋದನು ಎನ್ನುವುದು ನನಗೆ ಗೊತ್ತಿಲ್ಲ. ಶನಿದೇವರ ಮಂದಿರದ ಹಿಂಭಾಗದಲ್ಲಿ 1 ನೇ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಒಂದು ಮನೆಯ ಬಳಿ ಕರೆದುಕೊಂಡು ಹೋಗಿ ಅದು ತಮ್ಮ ಮನೆ ಎಂದು ತೋರಿಸಿದನು ಎನ್ನುವುದು ನನಗೆ ಗೊತ್ತಿಲ್ಲ.

7. ಅಲ್ಲಿ 1 ನೇ ಆರೋಪಿ ಹಿರೋ ಸ್ಪ್ಲೆಂಡರ ಮೋಟರಸೈಕಲನ್ನು ತೋರಿಸಿದನು ಎನ್ನುವುದು ನನಗೆ ಗೊತ್ತಿಲ್ಲ. ಅದೇ ಮೋಟರಸೈಕಲನಲ್ಲಿ ನಾವು ಸಮಾಧಿಮಠಕ್ಕೆ ಹೋಗಿ ಕೊಲೆ ಮಾಡಲು ಸಂಚು ರೂಪಿಸಿದೇವು ಎಂದು 1 ನೇ ಆರೋಪಿ ಹೇಳಿದನು ಎನ್ನುವುದು ಸರಿಯಲ್ಲ. ಪೋಲಿಸರು ಆ ಸ್ಥಳದಲ್ಲಿ ನಿಪಿ–48 ರಂತೆ ಪಂಚನಾಮೆ ಮಾಡಿ ನಿಪಿ–48[ಬಿ] ರಂತೆ ನನ್ನ ಸಹಿ ಮಾಡಿಸಿಕೊಂಡರು ಎನ್ನುವುದು ಸರಿಯಲ್ಲ.

8. ದಿನಾಂಕಃ 04-04-2019 ರ ಮೇಲೆ ಪೋಲಿಸ ನೋಟಿಸಿನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ-44 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-44 ಬಿ ಎಂದು ಗುರುತಿಸಲಾಯಿತು. ಆ ನೋಟಿಸಿನ ಪ್ರಕಾರ ನಾನು ಪೋಲಿಸ ಠಾಣೆಗೆ ಹೋಗಿದ್ದು ಆ ಸಮಯದಲ್ಲಿ ಆರೋಪಿತರು ಠಾಣೆಯಲ್ಲಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

9. 3 ನೇ ಆರೋಪಿ ಮೃತ ಅರವಿಂದ ಪೋಳ ಅವರ ಶವ ಸಾಗಿಸುವ ಸಮಯದಲ್ಲಿ ತಾನು ಧರಿಸಿದ ಬಟ್ಟೆ , ತನ್ನ ಮೊಬೈಲ, ಮೃತನ ಕೊರಳಿನಲ್ಲಿದ್ದ ಬಂಗಾರದ ಸರ ಮತ್ತು ಎರಡು ಉಂಗುರುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದನು ಎನ್ನುವುದು ನನಗೆ ಗೊತ್ತಿಲ್ಲ. 3 ನೇ ಆರೋಪಿ ನನಗೆ ಹಣಬರ ಗಲ್ಲಿಯಲ್ಲಿರುವ 3 ನೇ ಆರೋಪಿಯ ಮನೆಗೆ ನಮ್ಮನ್ನು ಕರೆದುಕೊಂಡು ಹೋಗಿ ಮನೆಯಲ್ಲಿರಿಸಿದಂತಹ ರಕ್ತ ಅಂಟಿದ್ದ ಒಂದು ತಿಳಿ ನೀಲಿ ಬಣ್ಣದ ಟಿ ಶರ್ಟ್ ಮತ್ತು ರಕ್ತ ಅಂಟಿದ್ದ  ನೀಲಿ ಬಣ್ಣದ  ಜೀನ್ಸ ಪ್ಯಾಂಟನ್ನು ಹಾಗೂ ಕಪ್ಪು ಬಣ್ಣದ ಸ್ಯಾಮಸಂಗ್ ಕಂಪನಿಯ ಮೊಬೈಲನ್ನು ಹಾಜರುಪಡಿಸಿದನು ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು ಮತ್ತು ಪೋಲಿಸರ ಇರುವಿಕೆಯನ್ನು ಗುರುತಿಸಿರುತ್ತಾರೆ. ಪೋಟೋವನ್ನು ಈಗಾಗಲೇ ನಿಪಿ-46 ಎಂದು ಗುರುತಿಸಲಾಗಿದೆ.

10. 3 ನೇ ಆರೋಪಿ ಕೃತ್ಯ ನಡೆದ ಸಮಯದಲ್ಲಿ ತಾನುಧರಿಸಿದ ಬಟ್ಟೆಗಳನ್ನು ಪೋಲಿಸರಿಗೆ ಹಾಜರುಮಾಡಿದ ಸಮಯದಲ್ಲಿ ನಿಪಿ-46 ಪೋಟೋ ತೆಗೆಯಲಾಯಿತು ಎನ್ನುವುದು ಸರಿಯಲ್ಲ.

11. 3 ನೇ ಆರೋಪಿ ಪೋಲಿಸರಿಗೆ ಹಾಜರುಮಾಡಿದ ಬಂಗಾರದ ಸರ ಮತ್ತು ಉಂಗುರಗಳನ್ನು ಜಪ್ತು ಮಾಡುವ ಸಮಯದಲ್ಲಿ ತೆಗೆಯಲಾದ ಪೋಟೋವನ್ನು ಸಾಕ್ಷಿ

ಗುರುತಿಸಿದ್ದಾರೆ ಅದನ್ನು ಈಗಾಗಲೇ ನಿಪಿ–34 ಎಂದು ಗುರುತಿಸಲಾಗಿದೆ ಮತ್ತು ಚಿನ್ನಾಭರಣಕಾರರು ಅದನ್ನು ತೂಕ ಮಾಡುವ ಸಮಯದಲ್ಲಿ ಸಹ ಪೋಟೋ ತೆಗೆದಿದ್ದು ಅದರಲ್ಲಿತ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–35 ಎಂದು ಗುರುತಿಸಲಾಗಿದೆ.

12. ಪೋಲಿಸರು ಪಂಚನಾಮೆ ಮಾಡಿದಂತಹ ಸ್ಥಳಗಳಲ್ಲಿಯೇ ನಾನು ಸಹಿ ಮಾಡಿದ್ದರೂ ಸಹ ಪೋಲಿಸ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೂರು ಜನ ಆರೋಪಿತರನ್ನು ಈ ಹಿಂದೆ ಪೋಲಿಸ ಠಾಣೆಯಲ್ಲಿ ನೋಡಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ.ಬಿ.ಎಸ್.ಆರ್ ವಕೀಲರಿಂದ 2 ನೇ ಆರೋಪಿ ಪರ ಶ್ರೀ.ಎಲ್.ಜಿ.ಎನ್ ವಕೀಲರಿಂದ ಹಾಗೂ 3 ನೇ ಆರೋಪಿ ಪರವಾಗಿ ಶ್ರೀ.ಬಿ .ಜಿ .ಜಿ . ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.